ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 204/2017

(ಫ್ರಾಸಾ-3 ಚಾಸಾ-3)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 03.12.2024

| | | |
|---|---|---|
| ಸಾಕ್ಷಿದಾರರ ಹೆಸರು | - | ಆನಂದ್ |
| ತಂದೆಯ ಹೆಸರು | - | ರಾಮಾಂಜಿನೆಪ್ಪ |
| ವಯಸ್ಸು | - | 36 ವರ್ಷ, |
| ಉದ್ಯೋಗ | - | ಸೆಕ್ಯೂರಿಟಿ |
| ವಾಸ | - | ತರಹುಣಸೆ, ಯಲಹಂಕ ತಾಃ |

<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

2013 ರಿಂದ 2018 ರವರೆಗೆ ಶ್ರೀರಾಮನಹಳ್ಳಿ ಗ್ರಾಮದಲ್ಲಿ ಗೃಹಲಕ್ಷ್ಮಿ ಗೃಹ ನಿರ್ಮಾಣ ಸಂಸ್ಥೆಯಲ್ಲಿ ಸೆಕ್ಯೂರಿಟಿ ಆಗಿ ಕರ್ತವ್ಯ ನಿರ್ಹಿಸಿರುತ್ತೇನೆ. ಬೆಳಗ್ಗೆ 7 ರಿಂದ ಸಂಜೆ 06.30 ರವರೆಗೆ ನನ್ನ ಕರ್ತವ್ಯದ ಅವಧಿಯಾಗಿತ್ತು.

2. ಚಾಸಾ-1 ಮತ್ತು 2 ಗೊತ್ತು. 1 ರಿಂದ 5 ನೇ ಆರೋಪಿತರು ಗೊತ್ತು. ಆರೋಪಿತರು ಮತ್ತು ಚಾಸಾ-1 ಮತ್ತು 2 ಸ್ಥಳೀಯರಾಗಿದ್ದರಿಂದ ನನಗೆ ಪರಿಚಯ ಇದ್ದಾರೆ. ದಿಃ24.07.2016 ರಂದು ಬೆಳಗ್ಗೆ 11.00-12.00 ಘಂಟೆ ಸಮಯದಲ್ಲಿ ನಾನು ಸೆಕ್ಯೂರಿಟಿ ಕೆಲಸ ಮಾಡುತ್ತಿದ್ದಾಗ ಚಾಸಾ-1 ಮತ್ತು 2 ರವರು ನಾನು ಕೆಲಸ ಮಾಡುತ್ತಿದ್ದ ಜಮೀನಿನ ಬಳಿ ಬಂದಿದ್ದು ಆರೋಪಿತರೆಲ್ಲರೂ ದೊಣ್ಣೆಗಳನ್ನು ಮತ್ತು ರಾಡ್ ಗಳನ್ನು ಹಿಡಿದುಕೊಂಡು ಬಂದಿದ್ದು ದೊಣ್ಣೆಗಳಿಂದ ಏಕಾಏಕಿ ಚಾಸಾ-1 ಮತ್ತು 2 ರವರ ಮೇಲೆ ಹಲ್ಲೆ ಮಾಡಿರುತ್ತಾರೆ. ಆರೇಪಿತರು ಮಾದಿಗ ನನ್ನ ಮಕ್ಕಳಾ, ಬೋಳಿ ಮಕ್ಕಳಾ ಎಂದು ಚಾಸಾ-1 ಮತ್ತು 2 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಜಾತಿ ನಿಂದನೆ ಮಾಡಿದರು. 1 ಮತ್ತು 2 ನೇ ಆರೋಪಿತರು ಚಾಸಾ-1 ರವರ ಕತ್ತಿನ ಪಟ್ಟಿ ಹಿಡಿದು ಎಳೆದಾಡಿರುತ್ತಾರೆ. ಆರೋಪಿತರು ಚಾಸಾ-1 ಮತ್ತು 2 ರವರಿಗೆ ಕೈಗಳಿಂದ ಸಹ ಹಲ್ಲೆ

ಮಾಡಿರುತ್ತಾರೆ. ಗಲಾಟೆಯಲ್ಲಿ ಚಾಸಾ-1 ರವರಿಗೆ ತಲೆಗೆ ರಕ್ತಗಾಯವಾಗಿದ್ದು ಚಾಸಾ-2 ರವರಿಗೆ ಕಣ್ಣಿನ ಬಳಿ ಮತ್ತು ಮೈ ಮೇಲೆ ಗಾಯವಾಗಿತ್ತು.

3. ಆಗ ಸ್ಥಳದಲ್ಲಿ ನಾನು ಮತ್ತು ಚಾಸಾ-4 ಇದ್ದು ಗಲಾಟೆ ನೋಡಿದ್ದೆವು. ರಸ್ತೆಯಲಿ ಹೋಗುತ್ತಿದ್ದ ಕಾರಿನಲ್ಲಿ ಚಾಸಾ-1 ಮತ್ತು 2 ರವರನ್ನು ನಾನು ಮತ್ತು ಚಾಸಾ-4 ಸೇರಿ ಮೊದಲು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ನಂತರ ಹೆಚ್ಚಿ ನ ಚಿಕಿತ್ಸೆಗಾಗಿ ಜಯನಗರ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿರುತ್ತೇವೆ. ಪೋಲಿಸರು ನನ್ನನ್ನು ವಿಚಾರಣೆ ಮಾಡಿದ್ದು ನಾನು ಹೇಳಿಕೆ ನೀಡಿರುತ್ತೇನೆ. ಆರೋಪಿತರು ಚಾಸಾ-1 ಮತ್ತು 2 ರವರಿಗೆ ಹಲ್ಲೆ ಮಾಡಿದ ದೊಣ್ಣೆಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಸದರಿ ದೊಣ್ಣೆಗಳನ್ನು ನೋಡಿ ಗುರುತಿಸಿದ್ದು ಅವುಗಳು ಈಗಾಗಲೇ ಮು.ಮಾ-1 ರಿಂದ 3 ಎಂದು ಗುರುತಿಸಲಾಗಿದೆ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ಆರೋಪಿತರ ಪರ ವಕೀಲರು ತಮ್ಮ ಹಿರಿಯ ವಕೀಲರು ಈ ದಿನ ನ್ಯಾಯಾಲಯಕ್ಕೆ ಹಾಜರಾಗಲು ಸಾಧ್ಯವಾಗದೇ ಇರುವುದರಿಂದ ಪಾಟೀ ಸವಾಲು ಇಲ್ಲ ಮಾಡಲು ಕಾಲಾವಕೋಶ ಕೋರಿದ್ದು ಸೂಕ್ತ ಕಾರಣ ಇಲ್ಲದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರುವಿಚಾರಣೆಃ ಇಲ್ಲ</u>**

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು